ದಿನಾಂಕಃ 09.01.2026

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯ್ತು.

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಜಿ ಆರ್ ವಕೀಲರಿಂದಃ-**

1. ನಾನು ನನ್ನ ವಕೀಲರಿಗೆ ತಕರಾರು ಹಾಕುವ ಸಮಯದಲ್ಲಿ ಮೂಲ ದಾಖಲೆಗಳನ್ನು ಕೊಟ್ಟಿದ್ದೇನೆ. ಸದರಿ ದಾಖಲೆಗಳ ನಕಲುಗಳನ್ನೇ ಎದುರು ಪಾರ್ಟಿಗೆ ಕೊಟ್ಟಿದ್ದೇನೆ ಎಂದರೆ ಸರಿ. ಅದರಲ್ಲಿ 100 ಪೇಜ್ ದಾಖಲೆಗಳಿವೆ ಎಂದರೆ ಸರಿ. ಎದುರುದಾರರಿಗೆ ಕೊಟ್ಟಿರುವ ದಾಖಲೆಗಳು ಇವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ – 18 ಎಂದು ಗುರುತಿಸಲಾಯಿತು. ನಿಪಿ – 18 ರಲ್ಲಿರುವ ಪುಟ ಸಂಖ್ಯೆ 45 ಮತ್ತು 46 ರ ದಾಖಲೆಗಳು ನನಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ಸದರಿ ಪುಟ ಸಂಖ್ಯೆ 46 ರ ದಾಖಲೆಯ ಕೊನೆಯಲ್ಲಿ my asthenozoosprmia ಎಂದು ನಮೂದಿಸಿದ್ದು, ಹಾಗೆಂದರೆ ಮಕ್ಕಳಾಗುವುದಿಲ್ಲ ಎಂದು ಅರ್ಥ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ.

2. ನಾನು ಅರ್ಜಿದಾರರ ವಸ್ತುಗಳನ್ನು ಪ್ಯಾಕ್ ಮಾಡಿ ಇಟ್ಟಾಗ ಸದರಿ ವಸ್ತುಗಳ ಲೀಸ್ಟ್ ಮಾಡಿ ಇಟ್ಟುಕೊಂಡಿಲ್ಲ. ಅವರ ವಾರ್ಡ್ ರೋಬನ್ನು ಅವರ ಅನುಮತಿಯಿಲ್ಲದೇ ನಾನು ತೆಗೆದಿದ್ದೇನೆ ಎಂದರೆ ಸಾಕ್ಷಿ ನನ್ನ ಬಳಿ ಒಂದು ಕೀ ಇತ್ತು, ನಾನು ತೆಗೆದಿದ್ದೇನೆ ಎಂದು ನುಡಿಯುತ್ತಾರೆ. ನಾನು ಅವರಿಗೆ ಮನೆ ಕೀ ಮತ್ತು ವಾರ್ಡ್ ರೋಬ್ ಕೀ ಕಳುಹಿಸಿಕೊಡು ಎಂದು ವಾಟ್ಸಪ್ ಮಾಡಿದ್ದೇನೆ ಎಂದರೆ ಸರಿ. ಅವರು ಆ ರೀತಿ ಕೀ ಕಳುಹಿಸಿಲ್ಲ ಎಂದರೆ ಸರಿ. ಅರ್ಜಿದಾರರು ಸದರಿ ವಾರ್ಡ್ ರೋಬ್ ನಲ್ಲಿ ಅವರ ತವರು ಮನೆಯವರು ಕೊಟ್ಟಿರುವ 227.5 ಗ್ರಾಂ ಬಂಗಾರ ಇಟ್ಟಿದ್ದು, ಅದನ್ನು ನಾವು ತೆಗೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

3. ನಮ್ಮ ಕುಟುಂಬದಲ್ಲಿ ಮದುವೆ ಸಮಯದಲ್ಲಿ ಹೆಣ್ಣಿನ ಕಡೆಯವರು ಬೆಳ್ಳಿ ಸಾಮಾನು ಕೊಡುತ್ತಾರೆ ಎಂದರೆ ಇರಬಹುದು. ಆ ರೀತಿ ಅರ್ಜಿದಾರರ ಮನೆಯವರು 5 ಕೆಜಿ 605 ಗ್ರಾಂ ಬೆಳ್ಳಿ ನಮಗೆ ಕೊಟ್ಟಿದ್ದಾರೆ, ಅದು ನಮ್ಮ ಬಳಿ ಇದೆ ಎಂದರೆ ಸುಳ್ಳು. ಸದರಿ ವಸ್ತುಗಳನ್ನು ನಾವು ಅರ್ಜಿದಾರರ ಬಳಿ ಕೇಳಿದ್ದು, ಅವರು ಕೊಡದ ಕಾರಣ ನಾವು ಅವರಿಗೆ ಹಿಂಸೆ ಕೊಟ್ಟು ಮನೆಯಿಂದ ಹೊರಗೆ ಹಾಕಿ ಅವುಗಳನ್ನು ತೆಗೆದುಕೊಂಡಿದ್ದೇವೆ ಎಂದರೆ ಸುಳ್ಳು.

4. ನಾವು ಮನೆ ಮೇಲೆ ಮಾಡಿದ ಸಾಲದ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ಮನೆ ಮಾರಾಟದ ಹಣ ನನ್ನ ಖಾತೆಯಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿ ನನ್ನ ತಾಯಿಯ ಖಾತೆಯಲ್ಲಿ ಇದೆ ಎಂದು ನುಡಿಯುತ್ತಾರೆ. ನಾನು ನಮ್ಮ ತಾಯಿಯ ಖಾತೆಗೆ ಹಾಕಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಎಸ್ ಬಿ ಐ ನಲ್ಲಿ ಖಾತೆ ಇತ್ತು ಎಂದರೆ ಸರಿ. ಅವರು ಸದರಿ ಖಾತೆಯಿಂದ ನನ್ನ ಖಾತೆಗೆ ಸಹ ಹಣ ಹಾಕುತ್ತಿದ್ದರು ಎಂದರೆ ಸರಿ. ಸದರಿ ಖಾತೆಯನ್ನು ನಾನೇ ಆಪರೇಟ್ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಮ್ಮ ಮಧ್ಯೆ ವಿವಾದ ಪ್ರಾರಂಭವಾದ ಮೇಲೆ ನಾನೇ ನಮ್ಮ ತಂದೆ ಖಾತೆಯನ್ನು ಚಲಾವಣೆ ಮಾಡುತ್ತಿದ್ದೆ ಎಂದರೆ ಸಾಕ್ಷಿ ಇಲ್ಲ, ನಮ್ಮ ತಂದೆ ತೀರಿಕೊಂಡಿದ್ದು, ಅಕೌಂಟ್ ಕ್ಲೋಸ್ ಆಗಿದೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತೀರಿಕೊಂಡ ಮೇಲೆ ಮೇ ತಿಂಗಳಿನಲ್ಲಿ ಸದರಿ ಖಾತೆ ಕ್ಲೋಸ್ ಆಗಿದೆ. ಮೇ ತಿಂಗಳವರೆಗೂ ಖಾತೆ ಇತ್ತು ಎಂದರೆ ಸರಿ. ಅದನ್ನು ಚಲಾವಣೆ ಮಾಡಿದ್ದೇವೆ ಎಂದರೆ ಸರಿ.

5. ನಮ್ಮ ತಂದೆ ಮೃತಪಟ್ಟ ಮೇಲೆ ಸದರಿ ಖಾತೆಯನ್ನು ಚಲಾವಣೆ ಮಾಡಲು ಅಧಿಕಾರ ಇಲ್ಲ ಎಂದರೆ ಸಾಕ್ಷಿ ನಮ್ಮ ತಾಯಿಗೆ ಪೆನ್ಷನ್ ಬರುತ್ತಿದ್ದ ಕಾರಣ ಬ್ಯಾಂಕ್ ನವರು ನಮ್ಮ ತಾಯಿಗೆ ಅಧಿಕಾರ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ನಮ್ಮ ತಂದೆಯ ಮರಣಾ ನಂತರ ಖಾತೆಯನ್ನು ನಾನೇ ಚಲಾವಣೆ ಮಾಡಿದ್ದರೂ ಬ್ಯಾಂಕ್ ನವರು ಅಧಿಕಾರ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮೊದಲಿನಿಂದಲೂ ಈ ರೀತಿ ಸುಳ್ಳು ಹೇಳುವುದು ಅಭ್ಯಾಸ ಎಂದರೆ ಸರಿಯಲ್ಲ. ನಮ್ಮ ತಂದೆಯ ಮರಣಾ ನಂತರ ನಮ್ಮ ತಂದೆಯ ಖಾತೆಯಿಂದ ನನ್ನ ಖಾತೆಗೆ ಹಣ ಬಂದಿದೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ಖಾತೆಗೆ ನಾನೇ ನಾಮಿನಿ ಆಗಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ನಾಮಿನಿಯಾಗಿ ಹಣ ಪಡೆದಿರುತ್ತೇನೆ. ಖಾತೆ ಮುಕ್ತಾಯಗೊಂಡಾಗ ನಾಮಿನಿಗೆ ಪೂರ್ತಿ ಹಣ ಬರುತ್ತದೆ ಎಂದರೆ ಸರಿ. ಆ ರೀತಿ ನನಗೆ 174 ರೂ ಬಂದಿರುತ್ತದೆ. ನಮ್ಮ ತಂದೆ ತೀರಿಕೊಂಡ ಮೇಲೆ ಖಾತೆ ಮುಕ್ತಾಯವಾಗುವವರೆಗೆ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸಾಕ್ಷಿ ನಮ್ಮ ತಾಯಿ ಮಾಡಿರಬಹುದು ಎಂದು ನುಡಿಯುತ್ತಾರೆ. ನಮ್ಮ ತಂದೆ ಮೃತಪಟ್ಟ ಮೇಲೆ ಸಹ ನಾನು ಮೂರು ಬಾರಿ ಸದರಿ ಖಾತೆಯಿಂದ ಹಣ ವರ್ಗಾವಣೆ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ನಮ್ಮ ತಾಯಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

6. ಈ ಕೇಸ್ ನಲ್ಲಿ ನೋಟೀಸ್ ಬಂದಾಗ ನಾನೇ ಉತ್ತರ ಕೊಟ್ಟಿದ್ದೇನೆ ಎಂದರೆ ಸರಿ. ನನಗೆ ಕಾನೂನು ತಿಳುವಳಿಕೆ ಚೆನ್ನಾಗಿ ಇದೆ ಎಂದರೆ ಸರಿ. ನ್ಯಾಯಾಲಯದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂದು ನನಗೆ ಗೊತ್ತಿದೆ ಎಂದರೆ ಸರಿ. ಅದೇ ರೀತಿ ಸುಳ್ಳು ಸಾಕ್ಷಿ ಹೇಳಿದರೆ ಶಿಕ್ಷೆ ಆಗುತ್ತದೆ ಎಂಬ ವಿಚಾರ ಗೊತ್ತಿದೆ ಎಂದರೆ ಸರಿ. ಅದೇ ರೀತಿ ದಾಖಲೆಗಳನ್ನು ಮರೆ ಮಾಚಿದರೂ ನ್ಯಾಯಾಲಯದಿಂದ ಶಿಕ್ಷೆ ಆಗುತ್ತದೆ ಎಂದು ಗೊತ್ತಿದೆ ಎಂದರೆ ಸರಿ. ಅದೇ ರೀತಿ ನ್ಯಾಯಾಲಯದ ಕಲಾಪಗಳಿಗೆ ಎದುರುದಾರರನ್ನು ತಪ್ಪು ದಾರಿಗೆ ಎಳೆದರೂ ಅದು ಶಿಕ್ಷಾರ್ಹ ಅಪರಾಧ ಎಂದರೆ ಸರಿ. ನಾನು ತಕರಾರಿನ ಜೊತೆ ಕೊಟ್ಟಿರುವ ಸಂಪೂರ್ಣ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಡದೇ ಮರೆ ಮಾಚಿ ತಪ್ಪು ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಗುರುತು ಮಾಡಿರುವ ದಾಖಲೆಗಳನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಎದುರುದಾರರಿಗೆ ಕೊಟ್ಟು ಅವರನ್ನು ತಪ್ಪುದಾರಿ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಪ್ರಕ್ರಿಯೆಗಳನ್ನು ನನ್ನ ಅನುಕೂಲಕ್ಕೆ ತಕ್ಕಂತೆ ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

7. ನಾನು ಅರ್ಜಿದಾರರಿಗೆ ನನ್ನ ವೀಕ್ನೆಸ್ ನಿಂದ ಅನೇಕ ಬಾರಿ ಹೊಡದು ಬಡಿದು ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಮಾಡಿದ್ದಕ್ಕೆ ಗಿರಿನಗರದಲ್ಲಿದ್ದಾಗ ಮಾಲೀಕರು ಮನೆ ಬಿಡಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲ, ಅವರು ಬರುವುದಿಲ್ಲ ಎಂದು ಹೇಳಿದ ಕಾರಣ ಖಾಲಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ  ಹೊಡೆದು ಬಡಿದು ನಾನು ಅವರನ್ನು ಹೊರ ಹಾಕಿದ ಕಾರಣ ಅದೇ ದಿನ ನನ್ನ ಮೇಲೆ ಅವರು ಕಂಪ್ಲೇಂಟ್ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲ, ಆ ದಿನ ನಾನೇ ಕಂಪ್ಲೇಂಟ್ ವಾಡಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಹೊಡೆದು ಮನೆಯಿಂದ ಆಚೆ ಹೋಗಿದ್ದಾಗ ಮನೆ ಮಾಲೀಕರೆ ಅರ್ಜಿದಾರರನ್ನು ಸೇವ್ ಮಾಡಿದ್ದಾರೆ ಎಂದರೆ ಸಾಕ್ಷಿ ಓನರ್ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಅದೆಲ್ಲಾ ನೋಡಿ ಓನರ್ ನನ್ನನ್ನು ಮನೆ ಖಾಲಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ವೀಕ್ನೆಸ್ ಗೆ ನಾನೇ ಅನೈಸರ್ಗಿಕವಾಗಿ ವರ್ತಿಸುತ್ತೇನೆ ಎಂದರೆ ಸರಿಯಲ್ಲ.

8. ಅರ್ಜಿದಾರರಿಗೆ ಸಂಬಂಧಿಸಿದ ಎಲ್ಲಾ ಸರ್ಟಿಫಿಕೇಟ್ ಗಳು ನನ್ನ ಬಳಿ ಇವೆ ಎಂದರೆ ಸಾಕ್ಷಿ ಇಲ್ಲ, ಅವರ ಅಕ್ಕ ಭಾವನ ಕಡೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಅವರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಅವರ ಬಳಿ ದಾಖಲೆ ಇದ್ದಿದ್ದರೆ ಅವರು ಬೇರೆ ಕಡೆ ಕೆಲಸ ಮಾಡುತ್ತಿದ್ದರು, ಅವರಿಗೆ ತೊಂದರೆ ಮಾಡಬೇಕು ಎಂಬ ಉದ್ದೇಶದಿಂದಲೇ ಸದರಿ ದಾಖಲೆಗಳನ್ನು ಅವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ನಾನು ಮದುವೆಯಾದ ಮೇಲೆ ಶಿಕಾರಿಪುರದ ಅರ್ಜಿದಾರರ ಮನೆಯಲ್ಲಿ ಬಂದು ಇರುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಅವರ ಮನೆಯಲ್ಲಿ ತಂದೆ ತಾಯಿ ಮಾತ್ರ ಇದ್ದು, ಅವರ ನಂತರ ಆಸ್ತಿ ಮಾಡಿಸಿಕೊಳ್ಳಬೇಕು ಎಂದು ಆ ರೀತಿ ತಿಳಿಸಿದ್ದೆ ಎಂದರೆ ಸರಿಯಲ್ಲ.

9. ನಾನು ನ್ಯಾಯಾಲಯಕ್ಕೆ ಕೊಟ್ಟಿರುವ ಅಸೆಟ್ಸ್ ಅಂಡ್ ಲೈಯಬಲಿಟೀಸ್ ಸುಳ್ಳು ದಾಖಲೆಗಳು ಎಂದರೆ ಸರಿಯಲ್ಲ. ನನ್ನ ಎಲ್ಲಾ ಆದಾಯವನ್ನು ನಮ್ಮ ತಂದೆ ಖಾತೆಗೆ ಜಮಾ ಮಾಡಿಸಿ ನನ್ನ ಖಾತೆಯಲ್ಲಿ ಕಡಿಮೆ ಹಣ ಇರುವಂತೆ ನೋಡಿಕೊಂಡಿದ್ದೇನೆ ಎಂದರೆ

ಸರಿಯಲ್ಲ. ಎಲ್ಲಾ ಖಾತೆಗಳನ್ನು ನಾನೇ ಚಲಾವಣೆ ಮಾಡುತ್ತಿದ್ದ ಕಾರಣ ನಮ್ಮ ತಂದೆ ಖಾತೆಯಿಂದ ನನಗೆ ಬೇಕಾದಾಗ ಸ್ವಲ್ಪ ಸ್ವಲ್ಪ ಹಣವನ್ನು ಉಪಯೋಗಿಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ನನ್ನ ಖಾತೆಯಲ್ಲಿ ಹೆಚ್ಚಿನ ಹಣ ಕಾಣದಂತೆ ಇವತ್ತಿನವರೆಗೂ ನೋಡಿಕೊಂಡು ನಾನು ನ್ಯಾಯಾಲಯದಲ್ಲಿ ಸುಳ್ಳು ದಾಖಲೆ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯ ಇದ್ದರೂ ಅದನ್ನು ಮರೆ ಮಾಚಿ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

10. ನನಗೆ ಮಕ್ಕಳಾಗುವುದಿಲ್ಲ ಎಂಬ ಒಂದು ವಿಚಾರ ಬಿಟ್ಟು ಯಾವುದೇ ನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ವಯಸ್ಸಾಗಿದೆ ಒಪ್ಪಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆ 75 ವರ್ಷದವರಾಗಿದ್ದರೂ ಚೆನ್ನಾಗಿದ್ದರು ಎಂದರೆ ಸಾಕ್ಷಿ ಅವರು ತೀರಿಕೊಂಡಾಗ 83 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. ಅವರು ವಯಸ್ಸಾದ ರೀತಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಈಗ 50 ವರ್ಷ ಆಗಿದ್ದರೂ 40 ವರ್ಷದ ಹುಡುಗನ ರೀತಿ ಕಾಣುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಕಿಲ್ಡ್ ಪರ್ಸನ್ ಎಂದರೆ ಸಾಕ್ಷಿ ಹೌದು, ಆದರೆ ಯಾರೂ ಕೆಲಸ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮಾಡಿರುವ ಕೆಲಸಗಳಲ್ಲಿ ಸೆಲ್ಫ್ ಎಂಪ್ಲಾಯ್ಮೆಂಟ್ ಸಂಬಂಧಿಸಿದ ಕೆಲಸಗಳನ್ನು ಮಾಡಿದ್ದೇನೆ ಎಂದರೆ ಸಾಕ್ಷಿ ಇಲ್ಲ, ಬೇರೆಯವರ ಕೆಳಗೆ ಕೆಲಸ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಸಾಕಷ್ಟು ಆದಾಯ ಇದ್ದರೂ ನ್ಯಾಯಾಲಯಕ್ಕೆ ನಿರುದ್ಯೋಗಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇದ್ದ ಎಲ್ಲಾ ಆದಾಯವನ್ನು ನಮ್ಮ ತಂದೆ ಇರುವವರೆಗೆ ಅವರ ಖಾತೆಗೆ ಜಮಾ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅದೇ ಖಾತೆ ಉಪಯೋಗಿಸಿಕೊಂಡು ನಾನು ನನಗೆ ಬೇಕಾದಾಗ ಖರ್ಚು ಮಾಡುತ್ತಿದ್ದೆ ಎಂದರೆ ಸರಿಯಲ್ಲ.

11. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಕೊಟ್ಟು ದಾರಿ ತಪ್ಪಿಸಿ ಸುಳ್ಳು ಸಾಕ್ಷಿ ಹೇಳಿ ಅಪರಾಧ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಹೆಂಡತಿಯ ಖರ್ಚು

ವೆಚ್ಚಗಳನ್ನು ಭರಿಸುವ ಬಾಧ್ಯತೆ ಇದೆ ಎಂದರೆ ಸಾಕ್ಷಿ ನನ್ನ ಯೋಗ್ಯತೆ ಅನುಸಾರ ಭರಿಸುತ್ತೇನೆ ಎಂದು ನುಡಿಯುತ್ತಾರೆ. ಅವರ ಸರ್ಟಿಫಿಕೇಟ್ ಗಳನ್ನು ನಾನು ಇಟ್ಟುಕೊಂಡಿರುವ ಕಾರಣ ಅವರು ಈಗ ನಿರುದ್ಯೋಗಿಯಾಗಿದ್ದಾರೆ ಎಂದರೆ ಸಾಕ್ಷಿ ನನ್ನ ಬಳಿ ಅವರ ಸರ್ಟಿಫಿಕೇಟ್ ಯಾವುದೂ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಅವರು ಭರತನಾಟ್ಯ ಹೇಳಿಕೊಟ್ಟು 20 ಸಾವಿರ ದುಡಿಯುತ್ತಿದ್ದಾರೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಗಣಕೀಕೃತ ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**